ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಮಂಗಳವಾರ, ದಿನಾಂಕ : 23ನೇ ಜುಲೈ, 2019

ಇಂಜಿನಿಯರಿಂಗ್ ಕಾಲೇಜುಗಳ ಕುರಿತು

ಶ್ರೀ ರವಿಕುಮಾರ್. ಎನ್ (ವಿಧಾನಸಭೆಯಿಂದ ಚುನಾಯಿತರಾದವರು):-

533 (494) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಇರಬೇಕಾದ ಕನಿಷ್ಟ ಮೂಲಭೂತ ಸೌಕರ್ಯಗಳೇನು; ಕಾಲೇಜನ್ನು ಪ್ರಾರಂಭಿಸಲು ಇರಬೇಕಾದ ಜಾಗದ ಬಗ್ಗೆ ಇರುವ ನಿಯಮಗಳೇನು;

(ಆ) ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೇ ನಂ.63ರ ಒತ್ತುವರಿ ಮಾಡಿಕೊಂಡಿರುವ 5 ಎಕರೆ ಸ್ಥಳದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲು ಅನುಮತಿ ನೀಡಿದವರು ಯಾರು;

(ಇ) ಇಸ್ಲಾಮಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜನ್ನು ಆರಂಭಿಸಲು ಸಲ್ಲಿಸಿರುವ ದಾಖಲೆಗಳಲ್ಲಿ ಈ ಕಾಲೇಜು ಹೊಂದಿರುವ ಅಥವಾ ಬಳಸಿಕೊಳ್ಳುತ್ತಿರುವ ಜಾಗದ ಕುರಿತು ಯಾವ ರೀತಿಯ ಮಾಹಿತಿಯನ್ನು ನೀಡಿದೆ; ಈ ಮಾಹಿತಿಯನ್ನು ಪರಿಶೀಲಿಸಿ ದೃಢೀಕರಿಸಿದ ಅಧಿಕಾರಿ ಯಾರು ?